3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.158/2021**

ಪ್ರಾಸಾ 12

ಚಾಸಾ 17

| | |
|---|---|
| ಹೆಸರು | ಹನುಮಂತರಾಯಪ್ಪ |
| ತಂದೆಯ ಹೆಸರು | ಹನುಮಪ್ಪ |
| ವಯಸ್ಸು | 59 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಯರಗುಂಟೆ |

ಸಾಕ್ಷಿಯನ್ನು ದಿನಾಂಕ 04.03.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಈಗ ನನಗೆ ತೋರಿಸಿದ ನಿಪಿ.9 ರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.9(ಬಿ) ಎಂದು ಗುರುತಿಸಲಾಯಿತು. ಸುಮಾರು ನಾಲ್ಕೈದು ವರ್ಷಗಳ ಹಿಂದೆ ಗೂಲಹಳ್ಳಿ ಗ್ರಾಮಕ್ಕೆ ನಾನು ಹೋಗಿದ್ದು ಆಗ ಪೊಲೀಸರು ಸದರಿ ಗ್ರಾಮಕ್ಕೆ ಬಂದಿದ್ದು ಆಗ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರು ಮಾಡಿದ ಪಂಚನಾಮೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ.

ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

2) ದಿಃ13.12.2019 ರಂದು ಮಧ್ಯಾಹ್ನ 12 ರಿಂದ 1 ಗಂಟೆ ಸಮಯದಲ್ಲಿ ನನ್ನನ್ನು ಮತ್ತು ಲಕ್ಷ್ಮೀಕಾಂತ್ ರವರನ್ನು ಮಧುಗಿರಿ ಡಿವೈಎಸ್‌ಪಿರವರ ಕಚೇರಿಗೆ ಬರಮಾಡಿಕೊಂಡಿದ್ದರು ಎಂದರೆ ನೆನಪಿಲ್ಲ. ಆಗ ನಮ್ಮ ಸಮಕ್ಷಮ ಡಿವೈಎಸ್‌ಪಿರವರು ಈಗಾಗಲೆ ಅಮಾನತ್ತುಪಡಿಸಿಕೊಂಡಿದ್ದ ಡೆತ್ ನೋಟನ್ನು FSL ಗೆ ಕಳುಹಿಸುವ ಸಲುವಾಗಿ ಮೃತ ಸಂಜೀವರಾಯಪ್ಪರವರ ಹಿಂದಿನದ ಬರಹಗಳ ಅವಶ್ಯವಿದ್ದು ಅದರಂತೆ ಮೃತ ಸಂಜೀವರಾಯಪ್ಪರವರು ವಿದ್ಯಾಭ್ಯಾಸ ಮಾಡಿದ್ದ ಯಲ್ಲೂರು ಗ್ರಾಮದ ವಿಶ್ವಭಾರತಿ ಪ್ರೌಢಶಾಲೆಯಿಂದ ಮೃತನ ಹಿಂದಿನ ಬರಹಗಳ ದಾಖಲಾತಿಗಳನ್ನು ಮಿಡಿಗೇಶಿ ಪೋಲೀಸ್ ಠಾಣೆಯ ಸಿಬ್ಬಂದಿ ಸಂಜೀವರಾಜುರವರು ಪಡೆದು ತಂದಿದ್ದು ಅವುಗಳನ್ನು ನಮ್ಮ ಸಮಕ್ಷಮ ವಶಕ್ಕೆ ತೆಗೆದುಕೊಂಡು ನಿಪಿ.9 ರಂತೆ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

3) ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲಾತಿಯು ಮೃತನ ಹಿಂದಿನ ಸಹಿಯುಳ್ಳ ದಾಖಲೆಯಾಗಿದ್ದು ಅದನ್ನು ನಿಪಿ.12 ಎಂದು, ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ.B.K.P.S. ವಕೀಲರಿಂದ :**

4) ನಿಪಿ.12 ಯಾವ ದಾಖಲೆ ಮತ್ತು ಏಕೆ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಬೀಟ್ ಕರ್ತವ್ಯಕ್ಕೆ ಬಂದಿರುತ್ತೇವೆ ಎಂದು ಹೇಳಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ